## ಎತ್ತುಗಳ ತರಬೇತಿಗೆ ಮಿನಿಗಾಡಿ

ಮಂಡ್ಯ ನಗರದ ಹೊರ ವಲಯದಲ್ಲಿ ಈಚೆಗೆ ವಿಹಾರಕ್ಕೆಂದು ಹೋಗಿದ್ದಾಗ, ಕಿರಗಂದೂರ ಗ್ರಾಮದ ಯುವ ರೈತನೊಬ್ಬ ಚಿಕ್ಕ ಗಾಡಿಯನ್ನು ಜೋಡೆತ್ತುಗಳಿಂದ ಎಳೆಯುತ್ತಿರುವುದನ್ನು ನೋಡಿ ಆಶ್ಚರ್ಯಗೊಂಡೆ.

ಪರಿಚಿತನಾಗಿದ್ದ ಆ ಯುವಕನನ್ನು, 'ಇದೇನು ಚಿಕ್ಕಗಾಡಿಯನ್ನು ಕಟ್ಟಿದೀಯಾ, ಇದರಿಂದ ಏನು ಪ್ರಯೋಜನ' ಎಂದು ಪ್ರಶ್ನಿಸಿದೆ. 'ಹೊಸ ಜೋಡೆತ್ತುಗಳಿಗೆ ತರಬೇತಿ ನೀಡಲು ಈ ಚಿಕ್ಕ ಗಾಡಿ ಮಾಡಿಸಿದ್ದೇನೆ' ಎಂದ. ಜೋಡೆತ್ತುಗಳಿಗೆ ಮೊದಲೆಲ್ಲಾ ಎತ್ತಿನಗಾಡಿಗಳಲ್ಲೇ ತರಬೇತಿ ನೀಡುತ್ತಿದ್ದರು. ಇನ್ನು ಹೊಸ ಜೋಡೆತ್ತುಗಳಾದ್ದರಿಂದ ಕೆಲವೊಮ್ಮೆ ಅವು ಬೆದರಿ ನಿಯಂತ್ರಣಕ್ಕೆ ಬಾರದೆ ಅಪಾಯಕಾರಿ ಸನ್ನಿವೇಶ ಎದುರಾಗುತ್ತದೆ. ಆದ್ದರಿಂದಲೇ ತರಬೇತಿಗಾಗಿಯೇ ಈ ಮಿನಿಗಾಡಿ ಮಾಡಿಸಿ, ಯುವಕ ತರಬೇತಿ ನೀಡುತ್ತಿರುವುದು ಒಳ್ಳೆಯ ವಿಚಾರ.

—ಸಿ. ಸಿದ್ದರಾಜು ಆಲಕೆರೆ, ಮಂಡ್ಯ





## ತೆಂಗಿನ ಮಡ್ಲಿನ ಕಲಾಕೃತಿ

ಸದಾ ಹೊಸದರ ಹಿಂದೆ ಬೀಳುವುದೇ ಕಲಾವಿದನ ಗುಣ. ಜನಸಾಮಾನ್ಯರು ಮತ್ತೆ ಮತ್ತೆ ನೋಡಿ ಕಣ್ತುಂಬಿಕೊಳ್ಳುವ ಕಲಾಕೃತಿಯೊಂದನ್ನು ಸಿದ್ಧಪಡಿಸಿದಾಗ ಆತನಿಗೆ ತೃಪ್ತಿ ಸಿಗುತ್ತದೆ. ಆತನಿಗೆ 'ಕಲೆ' ಮುಖ್ಯವಾಗಿರುತ್ತದೆಯೇ ವಿನಃ ಅದಕ್ಕೆ ಬಳಸುವ 'ವಸ್ತು'ವಲ್ಲ ಎನ್ನುವುದಕ್ಕೆ ಚಿತ್ರದಲ್ಲಿ ಕಾಣುವ ಕಲಾಕೃತಿಯೇ ಸಾಕ್ಷಿ. ಈ ಚಿತ್ರವನ್ನು ನೋಡಿದರೆ ಮನಸ್ಸಿಗೂ ಖುಷಿ ನೀಡುತ್ತದೆ.

ಹಾಗಂತ ಈ ಕಲಾಕೃತಿ ಮಾರುಕಟ್ಟೆಯಲ್ಲಿ ಸಿಗುವ ವಸ್ತುಗಳಿಂದ ಸಿದ್ಧವಾಗಿಲ್ಲ. ಇದು ಕೃಷಿಕರ ಹಿತ್ತಲಲ್ಲಿ ಬಿದ್ದಿರುವ ತೆಂಗಿನ ಮಡ್ಲಿನಿಂದ ಮೂಡಿದ ಕಲಾಕೃತಿ ಇದು. ನಿರುಪಯುಕ್ತ ವಸ್ತುವಿನಿಂದಲೂ ಸುಂದರ ಕಲಾಕೃತಿ ಮಾಡಬಹುದು ಎಂಬುದಕ್ಕೆ ಚಿತ್ರದಲ್ಲಿನ ಕಲಾಕೃತಿಯೇ ಉತ್ತಮ ನಿದರ್ಶನ. ಈ ಕೈಚಳಕದ ಹಿಂದಿರುವ ಕೈ ಉತ್ತರಕನ್ನಡ ಜಿಲ್ಲೆಯ ಯಲ್ಲಾಪುರ ತಾಲ್ಲೂಕಿನ ಉಮ್ಮಚಗಿ ಬಳಿಯ ಜಾಲೀಮನೆಯ ವೆಂಕಣ್ಣರದ್ದು. ಅವರು ಈ ಕಲಾಕೃತಿಯನ್ನು ತಮ್ಮ ಮನೆಯಂಗಳದಲ್ಲಿಯೇ ಇರಿಸಿ, ಮನೆಯ ಸೊಬಗನ್ನು ಹೆಚ್ಚಿಸಿದ್ದಾರೆ.

—ಗಣಪತಿ ಹಾಸ್ಪುರ, ಯಲ್ಲಾಪುರ

## 'ಬೇಸರವಿಲ್ಲ ಈ ನಿಸರ್ಗಕ್ಕೆ'

ಈಚೆಗೆ ಪ್ರವಾಸಕ್ಕೆ ಹೋಗಿದ್ದೆ. ಹೊಸಪೇಟೆಯಿಂದ ಹೊರಟ ರೈಲು ವ್ಯಾಸನಕೇರಿ ರೈಲ್ವೆ ನಿಲ್ದಾಣದಲ್ಲಿ (ಟಿ.ಬಿ.ಡ್ಯಾಂ ಹತ್ತಿರ) ಕ್ಷಣ ಹೊತ್ತು ನಿಂತು ಬೇರೊಂದು ಟ್ರೇನಿಗೆ ಕ್ರಾಸಿಂಗ್ ನೀಡಿತು. ಬಳಿಕ ಅದು ಚಲಿಸಲು ಆರಂಭಿಸಿತು. ಸೂರ್ಯನ ಕಿರಣಗಳು ಪೂರ್ವ ದಿಕ್ಕಿನಿಂದ ಮ್ಯಾಂಗನೀಸ್ ಬೆಟ್ಟದ ಮಡಿಲಲ್ಲಿರುವ ಮರಗಿಡಗಳ ರೆಂಬೆ ಕೊಂಬೆಗಳ ಮೂಲಕ ಚಲಿಸುತ್ತಿದ್ದ ರೈಲಿನಲ್ಲಿ ನೆರಳು ಬೆಳಕಿನಾಟ ನೋಡಿ ಆನಂದಿಸುತ್ತಿದ್ದೆ. ಓಡುತ್ತಿದ್ದ ರೈಲಿನ ವಿರುದ್ಧ ದಿಕ್ಕಿನಲ್ಲಿ ಮರ ಗಿಡಗಳ ರೆಂಬೆ ಕೊಂಬೆಗಳಿಂದ ಹೊರ ಹೊಮ್ಮುತ್ತಿದ್ದ ಸೂರ್ಯನ ಕಿರಣಗಳು ಹಚ್ಚ ಹಸುರಿನ ಎಳೆಯ ಎಲೆಗಳು ನನ್ನ ಕಣ್ಣಿಗೆ ರಾಚುತ್ತಿದ್ದವು. ಕೂಡಲೇ ಮೊಬೈಲ್ ಹೊರತೆಗೆದು ನಾಲ್ಕೈದು ಫೋಟೊ ಕ್ಲಿಕ್ಕಿಸುತ್ತಿದ್ದಂತೆ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಅವರು ಬರೆದ ಸುಭಾಷಿತ 'ಬೇಸರವಿಲ್ಲ ಈ ನಿಸರ್ಗಕ್ಕೆ ಸದಾ ಹೊಚ್ಚ ಹೊಸದಾಗಿ ಹೊಮ್ಮುವುದಕ್ಕೆ' ನೆನಪಾಯ್ತು. ಬಿರು ಬಿಸಿಲಿನ ತಾಪಕ್ಕೆ ಭೂತಾಯಿ ಮಡಿಲಲ್ಲಿರುವ ಮರಗಿಡಗಳು ಒಣಗಿದ್ದರೂ, ಬೆಂಕಿಯಲ್ಲಿ ಬೆಂದು ಬಸವಳಿದಿದ್ದರೂ ಎದೆಯಾಳದಲ್ಲಿನ ಅಂತರ್ಜಲ ಬೇರುಗಳ ಮೂಲಕ ಚಿಗುರುವ ಎಲೆಗಳು ನೋಡಲು ಎಷ್ಟು ಸುಂದರ ಅಲ್ಲವೇ. ವರುಣನ ಆಗಮನ ತಡವಾದರೂ ತನ್ನ ಒಡಲಲ್ಲಿನ ಮರ ಗಿಡಗಳಿಗೆ ಬೇಸರಿಸದೇ, ಜೀವಜಲದ ಮೂಲಕ ನಿಸರ್ಗಕ್ಕೆ ವಸಂತದ ಸೊಬಗನ್ನು ಧಾರೆಯೆರೆವ ಭೂತಾಯಿ ಕರುಣೆ, ಮನುಷ್ಯರಿಗೆ ಆದರ್ಶವಾಗಬೇಕಲ್ಲವೇ...

—ಅನುರಾಧ ಟಿ., ದಾವಣಗೆರೆ

